Carrying on
The 9th Year Tradition of
Service To Digital Society

Digital Society Foundation

Affiliated
to
Cyber Law College

Regd Office: 37, “Ujvala”, 20th Main, B S K Stage I, Bangalore 560050
E-Mail: dsfoundation@gmail.com Web: www.dsfoundation.in
Ph: 9343 55 4943 : (080) 41124431

# ಪತ್ರಿಕಾ ಪ್ರಕಟಣೆ

೨೦೦೦ ನೇ ವರ್ಷದ ಗಣಕ ಸಮಾಜದ ದಿನಾಚರಣೆಯ ಅಂಗವಾಗಿ, ಡಿಜಿಟಲ್ ಸೊಸೈಟಿ ಆಫ್ ಇಂಡಿಯ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ ಹಾಗೂ ಕೆ.ಎಲ್.ಇ. ಲಾ ಕಾಲೇಜು, ರಾಜಾಜಿನಗರದ ಸಹಯೋಗದೊಡನೆ ಅಕ್ಟೋಬರ್ ೧೭ರಂದು “ ಗಣಕ ಸಮಾಜದಲ್ಲಿ ವೈಯುಕ್ತಿಕ ಮಾಹಿತಿ ಹಕ್ಕು ಮತ್ತು ಮಾಹಿತಿ ರಕ್ಷಣೆ ಕಾನೂನು” ಬಗ್ಗೆ ವಿಚಾರ ಸಂಕಿರಣ ವನ್ನು ಏರ್ಪಡಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ನಡೆದಿರುವ ಅನೇಕ ಸೈಬರ್ ಅಪರಾಧಗಳ ಪತ್ತೆಯಲ್ಲಿ ಪೊಲೀಸರು ಅಪರಾಧಿಗಳನ್ನು ಕಂಡು ಹಿಡಿಯಲು ಸೈಬರ್ ಜಾಡು ಸಹಾಯ ಮಾಡಿದೆ. ಹಾಗೇ ಅನೇಕ ವೇಳೆ, ಅಪರಾಧಗಳ ಜಾಡನ್ನು ಮುಚ್ಚಲು ಕೂಡ ಸೈಬರ್ ವ್ಯವಹಾರಗಳು ಸಹಾಯ ಮಾಡಿದೆ. ಇಂತಹ ಸಂಧರ್ಭ ಗಳಲ್ಲಿ ಅಪರಾಧಿಗಳು ಮಾಹಿತಿ ಹಕ್ಕನ್ನು ಉಪಯೋಗಿಸಿ ತಪ್ಪಿಸಿಕೊಂಡ ಉದಾಹರಣೆಗಳೂ ಇವೆ.

ಇದೇ ಸಮಯದಲ್ಲಿ ಮಾಹಿತಿ ತಂತ್ರಜ್ಞಾನ ಕಂಪನಿಗಳು ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿನ ನಿರ್ಭಂಧಗಳಿಗೋಸ್ಕರ ಭಾರತದಲ್ಲಿ ಮಾಹಿತಿ ಸುರಕ್ಷಣಾ ಕಾನೂನು ತರಬೇಕೆಂಬ ಬೇಡಿಕೆಯನ್ನು ಸರ್ಕಾರಕ್ಕೆ ಕೊಟ್ಟಿವೆ. ಈ ಕಾನೂನಿನ ಉದ್ದೇಶ ಪರೋಕ್ಷವಾಗಿ ವೈಯುಕ್ತಿಕ ಮಾಹಿತಿ ಹಕ್ಕಿನ ರಕ್ಷಣೆಯೇ ಆಗಿದ್ದರೂ ಅದು ವ್ಯಕ್ತಿಕೇಂದ್ರಿತವಾಗದೆ ವ್ಯಾವಹಾರಿಕ ಕೇಂದ್ರಿತವಾಗಿರುತ್ತದೆ.

ಈಗ ಕೇಂದ್ರ ಸರ್ಕಾರ ವೈಯುಕ್ತಿಕ ಮಾಹಿತಿ ಸಂರಕ್ಷಣಾ ಕಾಯಿದೆಯ ಕರಡೊಂದನ್ನು ಸಿದ್ಧಪಡಿಸಿದೆ. ಇದರೊಂದಿಗೆ ಮಾಹಿತಿ ತಂತ್ರಜ್ಞಾನ ಕಾಯಿದೆ ೨೦೦೦ ವನ್ನು ಕೂಡಾ ತಿದ್ದುಪಡಿಮಾಡಲು ಯೋಜಿಸಲಾಗಿದೆ.

ವೈಯುಕ್ತಿಕ ಮಾಹಿತಿ ಹಕ್ಕು, ವ್ಯಾವಹಾರಿಕ ಮಾಹಿತಿ ಸಂರಕ್ಷಣೆ ಹಾಗೂ ದೇಶದ ಸಂರಕ್ಷಣೆ ಮೂರೂ ಉದ್ದೇಶಗಳು ಒಂದೇ ಕಾಯಿದೆಯ ಚೌಕಟ್ಟಿನಲ್ಲಿ ಬರಬೇಕಾದ ಅಗತ್ಯವಿದ್ದು ಈಗ ಬರಲಿರುವ ಕಾನೂನು ಈ ಉದ್ದೇಶಕನ್ನುಗುಣವಾಗಿರುತ್ತದೆಯೇ ಎಂಬುದು ಪರಿಣಿತರು ಚರ್ಚಿಸಬೇಕಾದ ವಿಷಯ.

ಈ ಉದ್ದೇಶವನ್ನು ನೆರೆವೇರಿಸಲು, ಅಕ್ಟೋಬರ್ ೧೭ರಂದು ವಿಚಾರ ಸಂಕಿರಣವನ್ನು ಆಯೋಜಿಸಿ ಕಾನೂನು ಮತ್ತು ಮಾಹಿತಿ ತಂತ್ರಜ್ಞಾನ ಪರಿಣಿತರೊಂದಿಗೆ ಚರ್ಚಿಸಲು ಯೋಜಿಸಲಾಗಿದೆ.

ಈ ಕಾರ್ಯಕ್ರಮದಲ್ಲಿ ರಾಜ್ಯದ ಮುಖ್ಯಮಂತ್ರಿಗಳೂ, ಕಾನೂನು ಮಂತ್ರಿಗಳೂ ಹಾಗೂ ಗೃಹಮಂತ್ರಿಗಳು ಭಾಗವಹಿಸಲು ಒಪ್ಪಿರುತ್ತಾರೆ.

ನಂತರದಲ್ಲಿ ಸಂಕಿರಣದಲ್ಲಿ ಮೂಡುವ ಸಲಹೆಗಳನ್ನು ಸರ್ಕಾರಕ್ಕೆ ಒದಗಿಸಲಾಗುತ್ತದೆ.